ರಾಜ್ ಸಂಸ್ಥೆಗಳಿಗೆ ಅಧಿಕಾರವನ್ನು ವಹಿಸಲಾಗುವುದು, ಮೊದಲನೆಯ ಹಂತದಲ್ಲಿ ಗ್ರಾಮ ಪಂಚಾಯತಿಗೆ ವಿತರಣೆಯ ಮೇಲುಸ್ತುವಾರಿ ಮತ್ತು ಜವಾಬ್ದಾರಿಯನ್ನು ನೀಡಲಾಗಿದೆ.

ಊ) ಯಾವುದೇ ತೊಂದರೆ ಇರುವುದಿಲ್ಲ.

4730 (4825) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) :– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವಿವಿಧ ಬಗೆಯ ಸಹಕಾರಿ ಸಂಘಗಳೆಷ್ಟು; ಸದರಿ ಸಹಕಾರಿ ಸಂಘಗಳ ಲಾಭ ಮತ್ತು ನಷ್ಟದ ವಿವರ ನೀಡುವುದು;

ಆ) ನಷ್ಟದಲ್ಲಿರುವ ಸಹಕಾರಿ ಸಂಘಗಳ ಪುನಃಶ್ಚೇತನಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಆರ್. ವಿ. ದೇಶ್‌ಪಾಂಡೆ (ಸಹಕಾರ ಸಚಿವರು) :

ಅ) ರಾಜ್ಯದಲ್ಲಿ ದಿನಾಂಕ 31–03–2005 ಕ್ಕೆ 32,173 ವಿವಿಧ ಬಗೆಯ ಸಹಕಾರ ಸಂಘಗಳಿರುತ್ತವೆ. 18,752 ಸಹಕಾರ ಸಂಘಗಳು ರೂ. 259.68 ಕೋಟಿಗಳ ಲಾಭಗಳಿಸಿವೆ ಮತ್ತು 13,421 ಸಂಘಗಳು ರೂ. 551.52 ಕೋಟಿಗಳ ಹಾನಿ ಅನುಭವಿಸಿವೆ.

ಆ) ನಷ್ಟದಲ್ಲಿರುವ ಸಹಕಾರ ಸಂಘಗಳ ಪುನಃಶ್ಚೇತನಕ್ಕಾಗಿ ಸರ್ಕಾರದಿಂದ ಈ ಕೆಳಕಂಡ ಕ್ರಮಗಳನ್ನು ಜರುಗಿಸಲಾಗಿದೆ.

1) ರಾಜ್ಯ ಸರ್ಕಾರ / ಜಿಲ್ಲಾ ಪಂಚಾಯತ್/ ತಾಲ್ಲೂಕು ಪಂಚಾಯತ್ ಯೋಜನೆಯಡಿಯಲ್ಲಿ ಸಾಲ, ಷೇರು ಹಾಗೂ ಸಹಾಯಧನ ರೂಪದಲ್ಲಿ ಆರ್ಥಿಕ ನೆರವು ನೀಡಲಾಗುತ್ತಿದೆ.

2) ಅಭಿವೃದ್ಧಿ ಕ್ರಿಯಾ ಯೋಜನೆ ಅಳವಡಿಸಲಾಗಿದೆ.

3) ವ್ಯಾಪಾರಾಭಿವೃದ್ಧಿ ಯೋಜನೆ ಅಳವಡಿಸಲಾಗಿದೆ.

4) ಕೃಷಿ ಮತ್ತು ಕೃಷಿಯೇತರ ಸಹಕಾರ ಸಂಘಗಳಲ್ಲಿ ಸಾಲ ವಸೂಲಾತಿಯನ್ನು ಉತ್ತಮ ಪಡಿಸಲು ಕ್ರಮ ಕೈಗೊಳ್ಳಲಾಗಿದೆ.

4731 (4826) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) :– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕುಗಳೆಷ್ಟು; ಈ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕುಗಳ ಲಾಭ ಮತ್ತು ನಷ್ಟದ ವಿವರ ನೀಡುವುದು ಹಾಗೂ ಅಂತರ ವಿವರ ನೀಡುವುದು;